**M.V.C.No.1429/2014** **PW-1**

<u>ದಿನಾಂಕಃ **23/07/2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.</u>

<u>ಪಾಟೀ ಸವಾಲುಃ **1**ನೇ ಎದುರುದಾರರ ಪರ ವಕೀಲರಿಂದಃ</u>

ಅಪಘಾತಕ್ಕೆ ಸಂಬಂಧಿಸಿದಂತೆ ಯಾರು ದೂರು ಕೊಟ್ಟಿದ್ದಾರೆ ಎಂದರೆ ಗೊತ್ತಿಲ್ಲ. ವೆಂಕಟೇಶ್ ಬಿನ್ ಬೀರೇಗೌಡ ನನ್ನ ಸಂಬಂಧಿಕರು. ಅಪಘಾತದಲ್ಲಿ ಮೃತಪಟ್ಟ ವ್ಯಕ್ತಿಗೆ ವೆಂಕಟೇಶ್ ಅಣ್ಣ ಆಗಬೇಕು ಎಂದರೆ ನಿಜ. ಅಪಘಾತಕ್ಕೆ ಸಂಬಂಧಿಸಿದಂತೆ ದೂರನ್ನು ನೀಡುವಾಗ ನನ್ನನ್ನು ಮತ್ತು ಅಪಘಾತವಾದ ಸ್ಥಳಕ್ಕೆ ಬಂದು ವೆಂಕಟೇಶ್ ಪರಿಶೀಲನೆ ಮಾಡಿದ್ದಾರೆ ಎಂದರೆ ನಿಜ. ಅಪಘಾತವಾದ ಸ್ಥಳ ಕೆ.ಆರ್.ನಗರಕ್ಕೆ ಹೋಗುವ ರಸ್ತೆ ಎಂದರೆ ನಿಜ. ಮೋಹನ್ ಕುಮಾರ್ ರವರು ಬೈಕ್ ಚಾಲನೆ ಮಾಡುವಾಗ ಯಾವುದೇ ಹೆಲ್ಮೆಟನ್ನು ಹಾಕಿರಲಿಲ್ಲ ಎಂದರೆ ನಿಜ. ಅಪಘಾತ ಸ್ಥಳದ ರಸ್ತೆ ಏರು ಮುಖ ರಸ್ತೆ ಎಂದರೆ ಸರಿಯಲ್ಲ. ಅಲ್ಲಿ ವಾಹನಗಳು ನಿಧಾನವಾಗಿ ಹೋಗುತಿದ್ದವು ಎಂದರೆ ವೇಗವಾಗಿ ಹೋಗುತಿದ್ದವು ಎನ್ನುತ್ತಾರೆ. ಯಾವುದೇ ವಾಹನಗಳು ಹೋಗುವಾಗ ವಾಹನಗಳ ಮಧ್ಯೆ ಅಂತರವನ್ನು ಕಾಯ್ದುಕೊಳ್ಳುವ ನಿಯಮ ಇದೆ ಎಂದರೆ ನಿಜ. ಅಪಘಾತವಾದ ದಿನ ಬಸ್ಸು ಎಡಭಾಗದಲ್ಲಿ ಬಿಳಿ ಗೆರೆಯ ಪಕ್ಕದಲ್ಲಿ ಹೋಗುತಿತ್ತು ಎಂದರೆ ಸರಿ. ಅದರ ಪಕ್ಕದಲ್ಲಿ ಬೈಕ್ ಪಾಸ್ ಆಗಲು ಅವಕಾಶ ಇತ್ತು ಎಂದರೆ ಬಸ್ಸಿನವನು ಸಡನ್ ಆಗಿ ಬ್ರೇಕ್ ಹಾಕಿದ ಎನ್ನುತ್ತಾರೆ. ನಾವು ಅಂತರವನ್ನು ಕಾಯ್ದುಕೊಂಡು ಬಂದಿದ್ದರೆ ಅಪಘಾತವನ್ನು ತಪ್ಪಿಸುವ ಅವಕಾಶ ಇತ್ತು ಎಂದರೆ ಸಡನ್ ಆಗಿ ಬ್ರೇಕ್ ಹಾಕಿದ ಕಾರಣ ಏನು ಮಾಡಬೇಕು ಎಂದು ಕೇಳುತ್ತಾರೆ. ಅಪಘಾತಕ್ಕೆ ಸಂಬಂಧಿಸಿದಂತೆ ನಾನು ದೂರು ಕೊಟ್ಟಿಲ್ಲ. ಪೊಲೀಸರ ಮುಂದೆ ಹೇಳಿಕೆಯನ್ನು ಕೊಟ್ಟಿದ್ದೇನೆ. ಅದರ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಮಾಡಿಲ್ಲ. ನಿಪಿ-18, 19, 21 ಮತ್ತು 25 ರಲ್ಲಿ ಪೆನ್ನಿನಲ್ಲಿ ಹೆಸರುಗಳನ್ನು ಬರೆದಿದೆ ಎಂದರೆ ಸರಿಯಲ್ಲ. ಪೆನ್ನಿನಲ್ಲಿ ಬರೆದಿರುವವರು ಯಾರು ಎಂದು ಸಹಿ ಹಾಕಿಲ್ಲ ಎಂದರೆ ನಿಜ. ಆ ದಿನ ಬೈಕಿನ ಚಾಲಕ ಅತೀ ವೇಗವಾಗಿ ಹೋಗಿ ಬಸ್ಸಿಗೆ ಗುದ್ದಿ ಅಪಘಾತ ಆಗಿದೆ ಎಂದರೆ ಸರಿಯಲ್ಲ. ನಾನು ಇದ್ದ ಬೈಕ್ ಚಾಲಕನ ತಪ್ಪಿನಿಂದ ಅಪಘಾತ ಆಗಿರುವ ಕಾರಣ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ.

**M.V.C.No.1429/2014** **PW-1**

ಪಾಟೀ ಸವಾಲುಃ **2**ನೇ ಎದುರುದಾರರ ಪರ ವಕೀಲರಿಂದಃ

ಅಪಘಾತ ಬಸ್ ಚಾಲಕನ ತಪ್ಪಿನಿಂದ ಸಂಭವಿಸಿದೆ. ಬೈಕ್ ಚಾಲಕನ ತಪ್ಪಿನಿಂದ ಅಪಘಾತ ಸಂಭವಿಸಿರಲಿಲ್ಲ ಎಂದರೆ ನಿಜ.

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇದೆ.

ಸಹಿ/-

(ಲೋಕೇಶ ಎಂ.ಜಿ)

ಸೀನಿಯರ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,

ಅರಕಲಗೂಡು